



# ಕಾಡಿಗೆ ಬೆಂಕಿ, ನಾಡಿಗೆ ಬರೆ

## ಅಧಿಕಾರಿಯೇ ಬೆಂಕಿ ಹಚ್ಚಿದ ಕಥೆ

ಅದು ತೊಂಬತ್ತರ ದಶಕದ ಮಾತು. ಬಂಡೀಪುರಕ್ಕೆ ಹೊಂದಿಕೊಂಡಂತೆಯೇ ತಮಿಳುನಾಡಿಗೆ ಸೇರಿದ ಮುದುಮಲೈ ಹುಲಿ ರಕ್ಷಿತಾರಣ್ಯವಿದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ಅರಣ್ಯದ ಒಂದು ವಲಯ ಸಂಪೂರ್ಣವಾಗಿ ಕಾಳ್ಗಿಚ್ಚಿಗೆ ಭಸ್ಮವಾಯಿತು. ಇದು ಆ ವಲಯದ ಅರಣ್ಯಾಧಿಕಾರಿಗೆ ತಲೆನೋವು ತಂದಿತು. ಇದು ದೊಡ್ಡ ಸುದ್ದಿಯಾಗಿ ತನ್ನ ತಲೆದಂಡವಾಗಲಿದೆ ಎನ್ನುವುದು ಅಧಿಕಾರಿಗೆ ಖಾತ್ರಿಯಾಯಿತು.

ಕಾಳ್ಗಿಚ್ಚು ಪ್ರದೇಶದಿಂದ ತಡರಾತ್ರಿ ಮನೆಗೆ ಬಂದ ಆತ ಸ್ಥಳೀಯ ಬುಡಕಟ್ಟು ಜನರನ್ನು ಬಳಸಿಕೊಂಡು ಅಕ್ಕಪಕ್ಕದ ಅರಣ್ಯ ವಲಯಗಳಿಗೂ ಬೆಂಕಿ ಹಚ್ಚಿಸಿದ. ಕೊನೆಗೆ, ಆತ ಇಲಾಖೆಯ ಶಿಸ್ತುಕ್ರಮದಿಂದ ಪಾರಾದ. ಆದರೆ, ನೀಲಗಿರಿ ಜೈವಿಕ ವಲಯ ವ್ಯಾಪ್ತಿಯ ಸಾವಿರಾರು ಎಕರೆ ಅರಣ್ಯ ಭಸ್ಮವಾಯಿತು. ಅಧಿಕಾರಿಗಳ ನಡುವಿನ ಸಿಟ್ಟು, ಹೊಂದಾಣಿಕೆ ಕೊರತೆಯೂ ವನ್ಯಸಂಪತ್ತಿಗೆ ಕಂಟಕ ತರುತ್ತದೆ.

## ಅಧಿಕಾರಿಗಳು ಎಡವಿದ್ದು ಎಲ್ಲಿ?

ಬಂಡೀಪುರ ಬೆಂಕಿಬಾಧಿತ ಅರಣ್ಯ. ಹಾಗಾಗಿ, ಬೆಂಕಿ ತಡೆಗೆ ವಾರ್ಷಿಕವಾಗಿ ಕೋಟ್ಯಂತರ ರೂಪಾಯಿ ಅನುದಾನ ಹರಿದುಬರುತ್ತದೆ. ಪ್ರಸಕ್ತ ವರ್ಷ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದಿಂದ ₹ 1.5 ಕೋಟಿ ಮತ್ತು ರಾಜ್ಯ ಸರ್ಕಾರದಿಂದ ₹ 1 ಕೋಟಿ ಅನುದಾನ ಬೆಂಕಿ ತಡೆ ಕಾರ್ಯಕ್ಕೆ ಬಿಡುಗಡೆಯಾಗಿದೆ ಎನ್ನುತ್ತವೆ ಮೂಲಗಳು.

ಜೊತೆಗೆ, 'ಹುಲಿ ಸಂರಕ್ಷಣಾ ನಿಧಿ'ಯಡಿ ಕೋಟ್ಯಂತರ ಹಣವಿದೆ. ಇದನ್ನು ಬೆಂಕಿರೇಖೆ ನಿರ್ಮಾಣ, ಅರಣ್ಯ ಸಂರಕ್ಷಣೆಗೆ ಬಳಸಿಕೊಳ್ಳಲು ಅವಕಾಶವಿದೆ. ಆದರೂ, ಮುಂಜಾಗ್ರತಾ ಕ್ರಮ ಕೈಗೊಳ್ಳುವಲ್ಲಿ ಹಿರಿಯ ಅಧಿಕಾರಿಗಳು ಎಡವಿದ್ದು ಎಲ್ಲಿ ಎನ್ನುವುದು ಕಾಡಂಚಿನ ಜನರ ಪ್ರಶ್ನೆ.

ವೀಕ್ಷಕರು, ರಕ್ಷಕರು ಮತ್ತು ವಲಯ ಅರಣ್ಯಾಧಿಕಾರಿಗಳು ಮಾತ್ರ. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೇರಿದಂತೆ ಹಿರಿಯ ಅಧಿಕಾರಿಗಳು ಕೆಳಹಂತದ ಸಿಬ್ಬಂದಿ ಮೇಲೆ ಜವಾಬ್ದಾರಿ ಹೊರಿಸಿ ನುಣುಚಿಕೊಳ್ಳುತ್ತಾರೆ.

ಕಾಳ್ಗಿಚ್ಚಿನ ವೇಳೆ ಅವರು ಸಿಬ್ಬಂದಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡುವುದಿಲ್ಲ. ಕೊನೆಗೆ, ಕರ್ತವ್ಯಲೋಪದ ಹೆಸರಿನಲ್ಲಿ ಮತ್ತೆ ಅರಣ್ಯ ರಕ್ಷಕರು ಹಾಗೂ ವಲಯ ಅರಣ್ಯಾಧಿಕಾರಿಗಳ ಮೇಲೆಯೇ ಶಿಸ್ತುಕ್ರಮದ ಅಸ್ತ್ರ ಪ್ರಯೋಗವಾಗುತ್ತದೆ. ಹಿರಿಯ ಅಧಿಕಾರಿಗಳ ಲೋಪ ಬೆಳಕಿಗೆ ಬರುವುದಿಲ್ಲ.

### ಬೆಂಕಿ ಹಚ್ಚುವ ತಂತ್ರಗಳು

ಅರಣ್ಯ ಸಿಬ್ಬಂದಿ ಎಷ್ಟೇ ಜಾಗೃತಿವಹಿಸಿದರೂ ಈ ದುಷ್ಕೃತ್ಯಕ್ಕೆ ಲಗಾಮು ಹಾಕುವುದು ಕಷ್ಟಕರ. ಕಿಡಿಗೇಡಿಗಳು ಕಾನನಕ್ಕೆ ಬೆಂಕಿ ಹಾಕಲು ಹೊಸ ಹೊಸ ವಿಧಾನಗಳನ್ನು ಶೋಧಿಸುತ್ತಲೇ ಇರುತ್ತಾರೆ. ಊಟದ ಸಮಯದಲ್ಲಿ ಸಿಬ್ಬಂದಿ ಕಚೇರಿ ಅಥವಾ ಮನೆಯತ್ತ ಬರುವುದು ಸಾಮಾನ್ಯ. ಕಾಡಿಗೆ ನುಗ್ಗಲು ದುಷ್ಕರ್ಮಿಗಳಿಗೆ ಇದು ಸೂಕ್ತ ಸಮಯ. ಸೌರಬೇಲಿ ದಾಟಿ ಅರಣ್ಯಕ್ಕೆ ನುಸುಳುತ್ತಾರೆ. ಜೊತೆಯಲ್ಲಿಯೇ ಎಳೆಂಟು ಮೀಟರ್ ಉದ್ದದ ತೆಂಗಿನ ಹಗ್ಗಗಳನ್ನು ಕೊಂಡೊಯ್ಯುತ್ತಾರೆ. ಜೇಬಿನಲ್ಲಿ ಬೆಂಕಿಪೊಟ್ಟಣವೂ ಇರುತ್ತದೆ.

ಒಣಗಿದ ಹುಲ್ಲು, ದಟ್ಟವಾಗಿ ಬಿದ್ದಿರುವ ತರಗೆಲೆಯ ಸ್ಥಳವನ್ನು ಆಯ್ದುಕೊಳ್ಳುತ್ತಾರೆ. ಹಗ್ಗದ ಒಂದು ತುದಿಗೆ ಬೆಂಕಿ ಹಚ್ಚುತ್ತಾರೆ. ತರಗೆಲೆ ಹತ್ತಿರ ಇರುವ ಹಗ್ಗದ ಮತ್ತೊಂದು ತುದಿಯ ಬಳಿ ಬೆಂಕಿಕಡ್ಡಿಗಳನ್ನು ಸುರಿಯುತ್ತಾರೆ. ಹಗ್ಗ ನಿಧಾನವಾಗಿ ಉರಿಯಲಾರಂಭಿಸುತ್ತದೆ. ತುದಿಗೆ ಬೆಂಕಿ ಮುಟ್ಟುವಾಗ ಸಂಜೆಗತ್ತಲಾಗಿರುತ್ತದೆ. ಬೆಂಕಿಯ ಕಿಡಿ ತಗುಲಿ ಬೆಂಕಿಕಡ್ಡಿಗಳು ಉರಿಯುವ ಜೊತೆಗೆ ಕಾಡಿಗೆ ಬೆಂಕಿ ಹೊತ್ತಿಕೊಳ್ಳುತ್ತದೆ. ಅರಣ್ಯದ ಒಂದೇ ಭಾಗದಲ್ಲಿ ಈ ರೀತಿ ಬೆಂಕಿ ಹಚ್ಚುವುದಿಲ್ಲ. ದುರ್ಗಮ ಸ್ಥಳಗಳಲ್ಲೂ ಬೆಂಕಿ ಹಚ್ಚುತ್ತಾರೆ.

ಬಿಸಿಲಿನ ಪ್ರಖರತೆಗೆ ಬಳಲಿದ ಸಿಬ್ಬಂದಿ ಆಯಾಸಗೊಂಡಿರುತ್ತಾರೆ. ರಾತ್ರಿವೇಳೆ ಬೆಂಕಿ ಬಿದ್ದಿರುವ ಸ್ಥಳಕ್ಕೆ ತೆರಳಲು ಆಗುವುದಿಲ್ಲ. ಮಧ್ಯಾಹ್ನದ ವೇಳೆ ಕಾಳ್ಗಿಚ್ಚು ಕಾಣಿಸಿಕೊಂಡರೂ ಆ ಜಾಗಕ್ಕೆ ತೆರಳಿ ಜ್ವಾಲೆಗಳ ಆರ್ಭಟ ಎದುರಿಸುವುದು ನಿಜಕ್ಕೂ ಸವಾಲು.